ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

ಸತ್ರ ಮೊಕದ್ದಮೆ ಸಂಖ್ಯೆ **20/2022**

| | | |
|---|---|---|
| ಹೆಸರು | ಃ ಹನಮಪ್ಪ ಮಾದರ | ಫ್ರಾಸಾ-02 |
| ತಂದೆಯ ಹೆಸರು | ಃ ಯಮನಪ್ಪ | ಚಾಸಾ-02 |
| ವಯಸ್ಸು | ಃ 70 ವರ್ಷ | |
| ಉದ್ಯೋಗ | ಃ ಒಕ್ಕಲುತನ | |
| ವಿಳಾಸ | ಃ ಕೆಸರಭಾವಿ, (ಮಹಾಂತಪುರ)<br>ತಾಃ ಇಳಕಲ್ಲ | |

ದಿಃ 04-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದ

ಅಂದಾಜು ಒಂದೂವರೆ ವರ್ಷದ ಹಿಂದೆ ಮಧ್ಯಾಹ್ನ 04.00 ಗಂಟೆ ಸುಮಾರಿಗೆ ಪೊಲೀಸರು ಶಾಂತಪ್ಪನ ತಗಡಿನ ಶೆಡ್ಡಿಗೆ ಬಂದಿದ್ದರು. ಅಲ್ಲಿ ನಮ್ಮ ಸಮಕ್ಷಮ ಪಂಚನಾಮೆ ಮಾಡಿ ನನ್ನ ಸಹಿ ಪಡೆದು ಒಂದು ಫೋಟೋ ತೆಗೆದರು. ಸದರಿ ಪಂಚನಾಮೆ ನಿಪಿ.3 ರಲ್ಲಿದ್ದು ಅದರಲ್ಲಿರುವ ನನ್ನ ಸಹಿ ನಿಪಿ.3(ಎ) ದಲ್ಲಿದೆ. ಫೋಟೋ ನಿಪಿ.2 ಎಂದು ಈಗಾಗಲೇ ಗುರುತಿಸಲಾಗಿದೆ. ಆ ಕಾಲಕ್ಕೆ ಇನ್ನೊಬ್ಬ ಪಂಚ ಚಾಸಾ-3 ಕೂಡ ಇದ್ದು ಅವನೂ ಸಹ ಪಂಚನಾಮೆಗೆ ಸಹಿ ಮಾಡಿರುತ್ತಾನೆ.

ಪಾಟೀ ಸವಾಲು ಶ್ರೀ ಎಬಿಜೆ ಆರೋಪಿತರ ಪರ ವಕೀಲರಿಂದ

ಶಾಂತಪ್ಪನ ಮನೆಯ ಆಜು ಬಾಜು ಬೇರೆಯವರ ಸಾಕಷ್ಟು ಮನೆಗಳು ಇರುತ್ತವೆ ಅನ್ನುವುದು ನಿಜ. ಸದರಿ ಮನೆಗಳಲ್ಲಿ ನಾಯಿಗಳನ್ನು ಸಾಕಿದ್ದಾರೆ ಅನ್ನುವುದು ನಿಜ. ಶಾಂತಪ್ಪನ ಮನೆಯಲ್ಲಿ ಗಲಾಟೆ ಮತ್ತು ಚೀರಾಟ ಆದರೆ ನಮಗೆ ಕೇಳಿಸುತ್ತದೆ ಅನ್ನುವುದು ನಿಜ. ಶಾಂತಪ್ಪನ ಮನೆಯ ಹತ್ತಿರ ದುರ್ಗಾದೇವಿ ಗುಡಿ ಇರುತ್ತದೆ ಅನ್ನುವುದು ನಿಜ. ಅದರ ಹತ್ತಿರ ಸಮುದಾಯ ಭವನ ಇರುತ್ತದೆ ಅನ್ನುವುದು ನಿಜ. ಸದರಿ ಗುಡಿಯಲ್ಲಿ ಪೂಜೆ ಮಾಡುತ್ತಾರೆ ಅನ್ನುವುದು ನಿಜ. ಸಮುದಾಯ ಭವನದಲ್ಲಿ ಮಲಗಿಕೊಳ್ಳುವುದನ್ನು ಯಾರೂ ಮಾಡುವುದಿಲ್ಲ. ಗುಡಿಯ ಹತ್ತಿರ ಸ್ವಲ್ಪ ಸ್ವಲ್ಪ ದೂರದಲ್ಲಿ ಮನೆಗಳು ಇರುತ್ತವೆ. ಪಂಚನಾಮೆಗೆ ಬರಲು ಅಸಾ-1 ನನಗೆ ಕರೆದಿದ್ದ. ನಿಪಿ.3 ನ್ನು ಪೊಲೀಸರು ಬರೆದಿರುತ್ತಾರೆ. ನಾನು ಶಾಲೆ ಓದದೇ ಇರುವುದರಿಂದ

ಅದರಲ್ಲಿ ಏನು ಬರೆದಿರುತ್ತಾರೆ ನನಗೆ ಗೊತ್ತಿಲ್ಲ. ಅಸಾ-1 ಮೂರ್ತೆಪ್ಪ ಈತನ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟ.